ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ/989/2020/ಎಆರ್‌ಇ-20

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:06-09-2022

**ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12 (3) ಅನ್ವಯ ವರದಿ**

ವಿಷಯ: ಶ್ರೀ ರಾಜಶೇಖರ ಬಿನ್ ಶಂಭುರಾವ್ ಬ್ರಹ್ಮಪೂರೆ, ಕಿರಿಯ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಬೀದರ್ ಇವರ (ಎದುರುದಾರರು) ದುರ್ನಡತೆ/ಕರ್ತವ್ಯ ಲೋಪದ ಕುರಿತು.

#####

ಶ್ರೀ ಸಂಜೀವಕುಮಾರ ಎನ್.ಕೆ. ಪೋಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೀದರ್ ಜಿಲ್ಲೆ (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ ಶ್ರೀ ರಾಜಶೇಖರ ಬಿನ್ ಶಂಭುರಾವ್ ಬ್ರಹ್ಮಪೂರೆ, ಕಿರಿಯ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಬೀದರ್ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಆದ ನೀವು-ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು ದೂರುದಾರರಾದ ಡಾ॥ ಸುಧಾಕರ ಬಿ.ಎಸ್., ಪೋಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಬೀದರ್ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕಲಬುರಗಿ ಇವರಿಗೆ ಕೊಟ್ಟಿರುವ ದೂರಿನ ಮೇಲೆ ಬೀದರ್ ಲೋಕಾಯುಕ್ತ ಪೋಲೀಸ್ ಠಾಣೆ ಕ್ರೈಂ ನಂ. 14/2015 ರನ್ವಯ ಲಂಚ ನಿರೋಧ ಕಾಯ್ದೆ 1988 ಕಲಂ 13(1) (ಇ) ಹಾಗೂ 13(2)ರಡಿಯಲ್ಲಿ ಪ್ರಕರಣವನ್ನು ದಾಖಲು ಮಾಡಿಕೊಳ್ಳಲಾಯಿತು. ತನಿಖಾಧಿಕಾರಿಯು ಸಲ್ಲಿಸಿರುವ ದೋಷಾರೋಪಣಾ ಪತ್ರವನ್ನು ಪರಿಶೀಲಿಸಿದಾಗ ಆರೋಪಿತರಾದ ಎದುರುದಾರರು ಕರ್ತವ್ಯ ನಿರ್ವಹಿಸಿರುವ ಪರಿಶೀಲನಾ ಅವಧಿಯಲ್ಲಿ ಅಂದರೆ ದಿನಾಂಕ:05-09-2003 ರಿಂದ ದಿನಾಂಕ;29-12-2015ರವರೆಗೆ ಬಲ್ಲ ಮೂಲಗಳಿಂದ ಬಂದಿರುವ ಆದಾಯಕ್ಕಿಂತ ಹೆಚ್ಚಿನ ಸುಮಾರು 112.94%ರಷ್ಟು ಹೆಚ್ಚಿನ ಆಸ್ತಿಯನ್ನು ಹೊಂದಿದ್ದು ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೆ ಅಕ್ರಮವಾಗಿ ಚರ ಮತ್ತು ಸ್ಥಿರ ಆಸ್ತಿಗಳನ್ನು ಖರೀದಿ ಮಾಡಿ ಎದುರುದಾರರು ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು

ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7 ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರು ತನಿಖೆ ಕೈಗೊಳ್ಳಲಾಗಿರುತ್ತದೆ.

**ಎದುರುದಾರರ ಮೇಲಿನ ಆಪಾದನೆಯ ಸಂಕ್ಷಿಪ್ತ ಸಾರಾಂಶ :-**

2. ಎದುರುದಾರರು ಕಿರಿಯ ಅಭಿಯಂತರರಾಗಿ ಹೇಮಾವತಿ ಬಲದಂಡೆ ನಾಲಾ ಉಪವಿಭಾಗ, ಜಲ ಸಂಪನ್ಮೂಲ ಇಲಾಖೆ, ಕೆಪಿಸಿಸಿ ಉಪವಿಭಾಗ-8, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ ಮತ್ತು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಬೀದರ್ ಇಲ್ಲಿ ದಿ.05-09-2003 ರಿಂದ 29-12-2015ರವರೆಗೆ ಇಲ್ಲಿ ಕರ್ತವ್ಯ ನಿರ್ವಹಿಸಿಕೊಂಡಿದ್ದು ಸರ್ಕಾರಿ/ಸಾರ್ವಜನಿಕ ನೌಕರರಾಗಿರುತ್ತಾರೆ.

3. ಎದುರುದಾರರು ದಿನಾಂಕ:05-09-2003 ರಿಂದ ದಿನಾಂಕ;29-12-2015ರ ಅವಧಿಯಲ್ಲಿ ಸರ್ಕಾರಿ/ಸಾರ್ವಜನಿಕ ನೌಕರನಾಗಿದ್ದು ಸದರಿಯವರ ಪದಾವಧಿಯಲ್ಲಿ ಅಂದರೆ ತಮ್ಮ ಮತ್ತು ತಮ್ಮ ಕುಟುಂಬದವರುಗಳ ಹೆಸರಿನಲ್ಲಿ ಗಳಿಸಿರುವ ಆಸ್ತಿ ಮೌಲ್ಯ ರೂ.68,71,301/-ರೂಗಳಾಗಿದ್ದು ಇದೇ ಅವಧಿಯಲ್ಲಿ ಅವರ ಕುಟುಂಬ ವರ್ಗದವರ ನಿರ್ವಹಣಾ ಖರ್ಚು ಒಟ್ಟು ರೂ.45,82,821/-ಗಳಾಗಿರುತ್ತದೆ. ಸದರಿಯವರ ಮತ್ತು ಸದರಿಯವರ ಕುಟುಂಬದ ಹೆಸರಿನಲ್ಲಿ ಸೇವಾ ಅವಧಿಯಲ್ಲಿ ಗಳಿಸಿರುವ ಒಟ್ಟು ಆಸ್ತಿ ಮತ್ತು ಅವರ ಕುಟುಂಬವರ್ಗದವರ ನಿರ್ವಹಣಾ ವೆಚ್ಚಗಳ ಒಟ್ಟು ಮೊತ್ತ ರೂ.1,14,54,123/-ಗಳಾಗಿರುತ್ತದೆ. ಸದರಿಯವರು ಗಳಿಸಿದ ಎಲ್ಲಾ ಬಲ್ಲ ಮೂಲಗಳ ಗೊತ್ತಾದ ಆದಾಯ ರೂ.53,78,844/-ಗಳಾಗಿರುತ್ತದೆ. ಈ ಅವಧಿಯಲ್ಲಿ ಎದುರುದಾರರ ಮತ್ತು ಎದುರುದಾರರ ಕುಟುಂಬದವರ ಹೆಸರಿನಲ್ಲಿ ಒಟ್ಟು ರೂ.60,75,279/-ರೂ ಅಕ್ರಮ ಆಸ್ತಿಪಾಸ್ತಿಗಳನ್ನು ಗಳಿಸಿದ್ದು, ಎದುರುದಾರರು ಆದಾಯಕ್ಕಿಂತ ಶೇ.112.94% ರಷ್ಟು ಹೆಚ್ಚಿನ ಅಕ್ರಮ ಆಸ್ತಿಯನ್ನು ಹೊಂದಿರುವುದು ಹೊಂದಿರುತ್ತಾರೆ ಎಂದು ತನಿಖಾಧಿಕಾರಿಗಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

4. ತನಿಖಾಧಿಕಾರಿಗಳು ಸಲ್ಲಿಸಿರುವ ವರದಿಯನ್ವಯ ಎದುರುದಾರರು ಈ ಕೆಳಕಂಡ ಆಸ್ತಿಗಳನ್ನು ಹೊಂದಿರುತ್ತಾರೆ.

1. ಎದುರುದಾರರು ತಮ್ಮ ಹೆಂಡತಿ ಶ್ರೀಮತಿ ಶೀಲಾವತಿ ಇವರ ಹೆಸರಿನಲ್ಲಿ ಬೀದರ್ ತಾಲ್ಲೂಕಿನ ಸಂಗೋಳಗಿ ಗ್ರಾಮದ ಸರ್ವೆ ನಂ.68 ಹಿಸ್ಸಾ ಪಿ3ರಲ್ಲಿನ 2 ಎಕರೆ 31 ಗುಂಟೆ ಜಮೀನನ್ನು ದಿನಾಂಕ:14-12-2010ರಂದು ರೂ.1,10,000/-ಗಳಿಗೆ ಖರೀದಿಸಿರುತ್ತಾರೆ. ಸದರಿ ಖರೀದಿ

ವ್ಯವಹಾರವು ಬೀದರ್‌ನ ಹಿರಿಯ ಉಪನೊಂದಣಾಧಿಕಾರಿಯವರ ಕಛೇರಿಯಲ್ಲಿ ದಿನಾಂಕ:14-12-2020ರಂದು ವಹಿ ಸಂಖ್ಯೆ.5177/2010-11ರಲ್ಲಿ ನಡೆದಿರುವುದು ಕಂಡುಬರುತ್ತದೆ. ಆದರೆ ಸದರಿ ಆಸ್ತಿಯನ್ನು ಖರೀದಿ ಮಾಡುವ ಸಂಬಂಧ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ.

2. ಎದುರುದಾರರು ತಮ್ಮ ಹೆಂಡತಿ ಶ್ರೀಮತಿ ಶೀಲಾವತಿ ಇವರ ಹೆಸರಿನಲ್ಲಿ ಬೀದರ್ ತಾಲ್ಲೂಕಿನ ಗೋಡಂಪಳ್ಳಿ ಗ್ರಾಮದ ಸರ್ವೆ ನಂ.24 ಹಿಸ್ಸಾ ಕ ರಲ್ಲಿನ 5 ಎಕರೆ ಜಮೀನನ್ನು ದಿನಾಂಕ:15-05-2007ರಂದು ರೂ.1,26,000/-ಗಳಿಗೆ ಖರೀದಿಸಿರುತ್ತಾರೆ. ಸದರಿ ಖರೀದಿ ವ್ಯವಹಾರವು ಬೀದರ್‌ನ ಹಿರಿಯ ಉಪನೊಂದಣಾಧಿಕಾರಿಯವರ ಕಛೇರಿಯಲ್ಲಿ ದಿನಾಂಕ:15-05-2007ರಂದು ವಹಿ ಸಂಖ್ಯೆ.716/2007-08ರಲ್ಲಿ ನಡೆದಿರುವುದು ಕಂಡುಬರುತ್ತದೆ. ಆದರೆ ಸದರಿ ಆಸ್ತಿಯನ್ನು ಖರೀದಿ ಮಾಡುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ.

3. ಎದುರುದಾರರು ತಮ್ಮ ಹೆಂಡತಿ ಶ್ರೀಮತಿ ಶೀಲಾವತಿ ಇವರ ಹೆಸರಿನಲ್ಲಿ ಬೀದರ್ ತಾಲ್ಲೂಕಿನ ಗೋಡಂಪಳ್ಳಿ ಗ್ರಾಮದ ಸರ್ವೆ ನಂ.25/ಅ ರಲ್ಲಿನ 3 ಎಕರೆ 32 ಗುಂಟೆ ಜಮೀನನ್ನು ದಿನಾಂಕ;03-06-2008ರಂದು ರೂ.80,000/-ಗಳಿಗೆ ಖರೀದಿಸಿರುತ್ತಾರೆ. ಸದರಿ ಖರೀದಿ ವ್ಯವಹಾರವು ಬೀದರ್‌ನ ಹಿರಿಯ ಉಪನೊಂದಣಾಧಿಕಾರಿಯವರ ಕಛೇರಿಯಲ್ಲಿ ದಿನಾಂಕ:3-6-2008ರಂದು ವಹಿ ಸಂಖ್ಯೆ.652/2008-09ರಲ್ಲಿ ನಡೆದಿರುವುದು ಕಂಡುಬರುತ್ತದೆ. ಆದರೆ ಸದರಿ ಆಸ್ತಿಯನ್ನು ಖರೀದಿ ಮಾಡುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ.

4. ಎದುರುದಾರರು ತಮ್ಮ ಹೆಂಡತಿ ಶ್ರೀಮತಿ ಶೀಲಾವತಿ ಇವರ ಹೆಸರಿನಲ್ಲಿ ಬೀದರ್ ತಾಲ್ಲೂಕಿನ ಚಿಟ್ಟಾ ಗ್ರಾಮದ ಸರ್ವೆ ನಂ.9999 ಹಿಸ್ಸಾ 39/40-5ರಲ್ಲಿನ 3 ಎಕರೆ 20 ಗುಂಟೆ ಜಮೀನನ್ನು ದಿನಾಂಕ;20-11-2006ರಂದು ರೂ.1,75,000/-ಗಳಿಗೆ ಖರೀದಿಸಿರುತ್ತಾರೆ. ಆದರೆ ಸದರಿ ಆಸ್ತಿಯನ್ನು ಖರೀದಿ ಮಾಡುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ.

5. ಎದುರುದಾರರು ತಮ್ಮ ಹೆಂಡತಿ ಶ್ರೀಮತಿ ಶೀಲಾವತಿ ಇವರ ಹೆಸರಿನಲ್ಲಿ ಬೀದರ್ ತಾಲ್ಲೂಕಿನ ಚಿಟ್ಟಾ ಗ್ರಾಮದ ಸರ್ವೆ ನಂ.9999 ಹಿಸ್ಸಾ 39/40–5ರಲ್ಲಿನ 3 ಎಕರೆ 20 ಗುಂಟೆ ಜಮೀನನ್ನು ದಿನಾಂಕ;20–11–2006ರಂದು ರೂ.1,75,000/–ಗಳಿಗೆ ಖರೀದಿಸಿರುವ ಜಮೀನಿನಲ್ಲಿ ಕಟ್ಟಡ ನಿರ್ಮಾಣ, ಷೆಡ್, ಬೋರ್‌ವೆಲ್ ಮತ್ತು ಫೆನ್‌ಸಿಂಗ್ ಖರ್ಚು ಒಟ್ಟು ರೂ.15,02,000/– ಮಾಡಿದ್ದು ಸದರಿ ಖರೀದಿ ವ್ಯವಹಾರವು ಬೀದರ್‌ನ ಹಿರಿಯ ಉಪನೊಂದಣಾಧಿಕಾರಿಯವರ ಕಛೇರಿಯಲ್ಲಿ ದಿನಾಂಕ:20–11–2006ರಂದು ವಹಿ ಸಂಖ್ಯೆ.4410/2006–07ರಲ್ಲಿ ನಡೆದಿರುವುದು ಕಂಡುಬರುತ್ತದೆ. ಸದರಿ ನಿರ್ಮಾಣಕ್ಕೆ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ.

6. ಎದುರುದಾರರು ತಮ್ಮ ಹೆಸರಿನಲ್ಲಿ ಬೀದರ್ ತಾಲ್ಲೂಕಿನ ಗೂನ್ನಳ್ಳಿ ಗ್ರಾಮದ ಸರ್ವೆ ನಂ.96/1/ಎಎರಲ್ಲಿ 6 ಎಕರೆ 35 ಗುಂಟೆ ಜಮೀನನ್ನು ರೂ.91,000/–ಗಳಿಗೆ ಖರೀದಿಸಿರುತ್ತಾರೆ. ಸದರಿ ಆಸ್ತಿಯಲ್ಲಿ ಅಭಿವೃದ್ಧಿಯಾಗಿರುವುದನ್ನು ಸಂಬಂಧಪಟ್ಟ ಇಂಜಿನಿಯರ್ ಇವರಿಂದ ತಪಾಸಣೆ ಮಾಡಿಸಿದಾಗ ರೂ.4,76,000/–ಗಳ ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡಿರುವುದು ಕಂಡುಬಂದಿರುತ್ತದೆ. ಆದರೆ ಸದರಿ ಆಸ್ತಿಯನ್ನು ಖರೀದಿ ಮಾಡುವ ಹಾಗೂ ಕಟ್ಟಡ ನಿರ್ಮಾಣ ಮಾಡುವ ಸಂಬಂಧ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ.

7. ಬೀದರ್‌ನ ಕೈಲಾಶ್ ನಗರದ ಮನೆ ನಂ.17–4–27 30 * 42 ವಿಸ್ತೀರ್ಣವಿದ್ದು ಇದರಲ್ಲಿ ಮೂರು ಕೋಣೆಗಳನ್ನು ಕಟ್ಟಿದ್ದು ಸದರಿ ಮನೆಯನ್ನು ಸದರಿಯವರು ಅಬ್ದುಲ್ ಗಫರ್ ಬಿನ್ ಮಹ್ಮದ್ ಮೌಲನಾ, ಕೈಲಾಶ್ ನಗರ, ಬೀದರ್ ಇವರಿಂದ ರೂ.2,16,500/–ಗಳಿಗೆ ದಿನಾಂಕ;24–03–2006ರಂದು ಖರೀದಿಸಿರುತ್ತಾರೆ. ಸದರಿ ಖರೀದಿ ವ್ಯವಹಾರವು ಬೀದರ್‌ನ ಹಿರಿಯ ಉಪನೊಂದಣಾಧಿಕಾರಿಯವರ ಕಛೇರಿಯಲ್ಲಿ ದಿನಾಂಕ:24–03–2006ರಂದು ವಹಿ ಸಂಖ್ಯೆ.4256/2005–06ರಲ್ಲಿ ನಡೆದಿರುವುದು ಕಂಡುಬರುತ್ತದೆ. ಹಾಗೂ ಮೊದಲನೇ ಮತ್ತು ಎರಡನೇ ಮಹಡಿಗಳನ್ನು ಕಟ್ಟಿಸಿದ್ದು ಅದರ ಅಂದಾಜು ಮೌಲ್ಯ ರೂ.20,70,000/–ಗಳಾಗಿರುತ್ತದೆ. ಆದರೆ ಸದರಿ ಆಸ್ತಿಯನ್ನು ಖರೀದಿ ಮಾಡುವ ಹಾಗೂ ಕಟ್ಟಡ ನಿರ್ಮಾಣ ಮಾಡುವ ಸಂಬಂಧ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ.

8. ಎದುರುದಾರರು ತಮ್ಮ ಹೆಸರಿನಲ್ಲಿ ಬೀದರನ ಜಂಗಲ್‌ಕೋಯಿಯಲ್ಲಿನ ಅಕ್ಕಮಹಾದೇವಿ ಕಾಲೋನಿಯ ಸರ್ವೆ ನಂ.5/3 ಮತ್ತು 6/2ರಲ್ಲಿ ನಿವೇಶನ ಸಂಖ್ಯೆ.21 ಮತ್ತು 22 ಸಿ.ಎಂ.ಸಿ. ನಂ.9–9–112/1 (ಪ್ರತಿಯೊಂದಿಗೆ 32 * 25 ಅಡಿಗಳು) ಅನ್ನು ದಿನಾಂಕ:01-07-2018ರಂದು ರೂ.1,40,000/–ಗಳಿಗೆ ಖರೀದಿಸಿರುತ್ತಾರೆ. ಸದರಿ ಖರೀದಿ ವ್ಯವಹಾರವು ಬೀದರ್‌ನ ಹಿರಿಯ ಉಪನೊಂದಣಾಧಿಕಾರಿಯವರ ಕಛೇರಿಯಲ್ಲಿ ದಿನಾಂಕ:1–7–2008ರಂದು ವಹಿ ಸಂಖ್ಯೆ.1265/2008–09ರಲ್ಲಿ ನಡೆದಿರುವುದು ಕಂಡುಬರುತ್ತದೆ. ಆದರೆ ಸದರಿ ಆಸ್ತಿಯನ್ನು ಖರೀದಿ ಮಾಡುವ ಸಂಬಂಧ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ.

9. ಎದುರುದಾರರು ತಮ್ಮ ಹೆಂಡತಿ ಶ್ರೀಮತಿ ಶೀಲಾವತಿ ಇವರ ಹೆಸರಿನಲ್ಲಿ ಬೀದರ್‌ನ ಕುಂಬಾರವಾಡದ ಸರ್ವೆ ನಂ.36/2ರಲ್ಲಿನ ನಿವೇಶನ ಸಂಖ್ಯೆ.76 ಸಿಎಂಸಿ ನಂ.15–5–566/1 ರಲ್ಲಿ 40 * 50 ಅಡಿಗಳ ವಿಸ್ತೀರ್ಣದ್ದನ್ನು ದಿನಾಂಕ;13–8–2008ರಂದು ರೂ.80,000/–ಗಳಿಗೆ ಖರೀದಿಸಿರುತ್ತಾರೆ. ಸದರಿ ಖರೀದಿ ವ್ಯವಹಾರವು ಬೀದರ್‌ನ ಹಿರಿಯ ಉಪನೊಂದಣಾಧಿಕಾರಿಯವರ ಕಛೇರಿಯಲ್ಲಿ ದಿನಾಂಕ:23–08–2008ರಂದು ವಹಿ ಸಂಖ್ಯೆ.2876/2008–09ರಲ್ಲಿ ನಡೆದಿರುವುದು ಕಂಡುಬರುತ್ತದೆ. ಆದರೆ ಸದರಿ ಆಸ್ತಿಯನ್ನು ಖರೀದಿ ಮಾಡುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ.

10. ಎದುರುದಾರರು ತಮ್ಮ ಭಾವನವರ ಮಗನಾದ ಶ್ರೀ ಸೈದಪ್ಪಾ ಇವರ ಹೆಸರಿನಲ್ಲಿ ಮಾರುತಿ ಸುಜುಕಿ ಎ–ಸ್ಟಾರ್ ಕಾರ್ ನಂ.ಕೆಎ–38–ಎಂ–1863 ಅನ್ನು ಹೊಂದಿರುವುದು ತನಿಖಾಧಿಕಾರಿಯವರ ವರದಿಯಲ್ಲಿ ಕಂಡುಬಂದಿರುತ್ತದೆ. ಸದರಿ ವಾಹನವನ್ನು 2014ನೇ ಇಸವಿಯಲ್ಲಿ ರೂ.2,70,000/–ಗಳಿಗೆ ಖರೀದಿಸಿರುವುದು ಕಂಡುಬರುತ್ತದೆ. ಆದರೆ ಸದರಿಯವರ ಭಾವನ ಮಗನಾದ ಸೈದಪ್ಪಾ ಇವರಿಗೆ ಆದಾಯ ಮೂಲ ಇದ್ದ ಬಗ್ಗೆ ಹಾಗೂ ಸದರಿ ಖಾತೆಯನ್ನು ಹೊಂದಿರುವ ಬಗ್ಗೆ ನಿಯಮಿಸಿದ ಪ್ರಾಧಿಕಾರಕ್ಕೆ ವಾರ್ಷಿಕ ಆಸ್ತಿ ಮತ್ತು ದಾಯಿತ್ವದ ವರದಿಯಲ್ಲಿ ನಮೂದಿಸಿರುವುದು ಕಂಡುಬಂದಿರುವುದಿಲ್ಲ.

11. ಎದುರುದಾರರು ತಮ್ಮ ಮಗನಾದ ಪ್ರೀತಮ್ ಇವರ ಹೆಸರಿನಲ್ಲಿ ಸ್ಕೂಟಿ ಪೆಪ್ ದ್ವಿಚಕ್ರ ವಾಹನ ಸಂಖ್ಯೆ.ಕೆಎ–38–ಕೆ–5138 ಅನ್ನು ಹೊಂದಿರುವುದು ತನಿಖಾಧಿಕಾರಿಯವರ ವರದಿಯಲ್ಲಿ

ಕಂಡುಬಂದಿರುತ್ತದೆ. ಸದರಿ ವಾಹನವನ್ನು ದಿನಾಂಕ;22-12-209ರಂದು ರೂ.31,000/-ಗಳಿಗೆ ಖರೀದಿಸಿರುವುದು ಕಂಡುಬರುತ್ತದೆ. ಆದರೆ ಎದುರುದಾರರ ಮಗನಾದ ಪ್ರೀತಮ್ ಇವರಿಗೆ ಆದಾಯ ಮೂಲ ಇದ್ದ ಬಗ್ಗೆ ಹಾಗೂ ಸದರಿ ಖಾತೆಯನ್ನು ಹೊಂದಿರುವ ಬಗ್ಗೆ ನಿಯಮಿಸಿದ ಪ್ರಾಧಿಕಾರಕ್ಕೆ ವಾರ್ಷಿಕ ಆಸ್ತಿ ಮತ್ತು ದಾಯಿತ್ವದ ವರದಿಯಲ್ಲಿ ನಮೂದಿಸಿರುವುದು ಕಂಡುಬಂದಿರುವುದಿಲ್ಲ.

12. ತನಿಖಾ ವರದಿಯ ಪ್ರಕಾರ ಎದುರುದಾರರು ಖಾತೆ ಸಂಖ್ಯೆ.1945840003621ರಲ್ಲಿ ರೂ.2,90,000/-ಗಳ ಸಾಲವನ್ನು ಕೆನರಾ ಬ್ಯಾಂಕ್, ಚಿತ್ತಾ ರಸ್ತೆ ಶಾಖೆ, ಬೀದರ್ ಇಲ್ಲಿ ತಮ್ಮ ಹೆಸರಿನಲ್ಲಿ ಪಡೆದುಕೊಂಡಿರುವುದಾಗಿ, ಖಾತೆ ಸಂಖ್ಯೆ.1945881003514ರಲ್ಲಿ ರೂ.3,75,000/-ಗಳ ಸಾಲವನ್ನು ಕೆನರಾ ಬ್ಯಾಂಕ್, ಚಿತ್ತಾ ರಸ್ತೆ ಶಾಖೆ, ಬೀದರ್ ಇಲ್ಲಿ ನಿಮ್ಮ ಹೆಸರಿನಲ್ಲಿ ಪಡೆದುಕೊಂಡಿರುವುದಾಗಿ, ಸದರಿಯವರ ಹೆಂಡತಿ ಶ್ರೀಮತಿ ಶೀಲಾವತಿ ಇವರ ಹೊಂದಿರುವ ಖಾತೆ ಸಂಖ್ಯೆ.19457995000065ರಲ್ಲಿ ರೂ.18,00,000/-ಗಳ ಸಾಲವನ್ನು ಕೆನರಾ ಬ್ಯಾಂಕ್, ಚಿತ್ತಾ ರಸ್ತೆ ಶಾಖೆ, ಬೀದರ್ ಇಲ್ಲಿ ತಮ್ಮ ಹೆಸರಿನಲ್ಲಿ ಪಡೆದುಕೊಂಡಿರುವುದಾಗಿ ತಿಳಿದುಬಂದಿರುತ್ತದೆ.

ಮೇಲೆ ತಿಳಿಸಿದ ಸ್ಥಿರಾಸ್ತಿಗಳ ಖರೀದಿ ಸಂಬಂಧ ಸಕ್ಷಮ ಪ್ರಾಧಿಕಾರದಿಂದ ಯಾವುದೇ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ ಹಾಗೂ ಖರೀದಿ ನಂತರದಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಯಾವುದೇ ಮಾಹಿತಿಯನ್ನು ಸಲ್ಲಿಸದೇ ನಿಯಮ 23(2) ಕರ್ನಾಟಕ ನಾಗರೀಕ ನಿಯಮಗಳು (ನಡತೆ) ನಿಯಮಗಳು 1966ರನ್ನು ಉಲ್ಲಂಘಿಸಿರುವುದು ಕಂಡುಬರುತ್ತದೆ. ಮುಂದುವರೆದು ಚರಾಸ್ತಿಗಳಾದ ವಾಹನಗಳ ಖರೀದಿ ಸಂಬಂಧ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ ಹಾಗೂ ಖರೀದಿ ನಂತರದಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಯಾವುದೇ ಮಾಹಿತಿಯನ್ನು ಸಲ್ಲಿಸದೇ ನಿಯಮ 23(3) ಕರ್ನಾಟಕ ನಾಗರೀಕ ನಿಯಮಗಳು (ನಡತೆ) ನಿಯಮಗಳು 1966ರನ್ನು ಉಲ್ಲಂಘಿಸಿರುವುದು ಕಂಡುಬರುತ್ತದೆ. ಬ್ಯಾಂಕುಗಳಿಂದ ಎದುರುದಾರರ ಹಾಗೂ ಸದರಿಯವರ ಹೆಂಡತಿಯ ಹೆಸರಿನಲ್ಲಿ ಸಾಲವನ್ನು ಪಡೆದುಕೊಳ್ಳುವ ಮೊದಲು ಹಾಗೂ ನಂತರದಲ್ಲಿ ಸಕ್ಷಮ ಪ್ರಾಧಿಕಾರದಿಂದ ಯಾವುದೇ ಅನುಮತಿಯನ್ನು ಪಡೆಯದೇ ನಿಯಮ 21(4) ಕರ್ನಾಟಕ ನಾಗರೀಕ ನಿಯಮಗಳು (ನಡತೆ) ನಿಯಮಗಳು 1966ರನ್ನು ಉಲ್ಲಂಘಿಸಿರುವುದು ಕಂಡುಬರುತ್ತದೆ.

ಮೇಲ್ಕಂಡ ಅಂಶ ಮತ್ತು ಪರಿವೀಕ್ಷಣಾ ಟಿಪ್ಪಣಿಗೆ ಎದುರುದಾರರು ಸಲ್ಲಿಸಿರುವ ಉತ್ತರ ಹಾಗೂ ಹಾಜರು ಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಎದುರುದಾರರಾದ ರಾಜಶೇಖರ ಬಿನ್ ಶಂಭೂರಾವ್ ಬ್ರಹ್ಮಪೂರೆ

ನಿವೃತ್ತಿ ದಿನಾಂಕ:30-06-2026) ಸರ್ಕಾರಿ/ಸಾರ್ವಜನಿಕ ನೌಕರರಾಗಿ ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು 1966ರ ನಿಯಮ 21(4), 23(2) ಮತ್ತು 23(3)ರ ಉಲಂಘನೆ ಮಾಡಿ, ದುರ್ನಡತೆ ತೋರಿಸಿರುವುದಲ್ಲದೆ, ಕರ್ತವ್ಯಲೋಪ ಎಸಗಿದ್ದಾರೆ ಎಂದು ಕಂಡುಬಂದಿರುತ್ತದೆ. ಆದ್ದರಿಂದ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಶಿಸ್ತು ಕ್ರಮಕ್ಕೆ ಒಳಪಡಲು ಬಾಧ್ಯರಾಗಿರುತ್ತಾರೆ ಹಾಗೂ ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯನಿಷ್ಠೆಯನ್ನು ತೋರಿಸದೆ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1) (i) ರಿಂದ (iii) ರಲ್ಲಿ ಹೇಳಿದಂತೆ ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದಿರುತ್ತದೆ. ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಉಪಲೋಕಾಯುಕ್ತರು-2 ರವರಿಗೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

06/9/22

(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ.